ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ನೇಕಾರರ ಬಗ್ಗೆ ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಸದಸ್ಯರುಗಳಾದ ಶ್ರೀ ಗೂಳಿಹಟ್ಟಿ ಶೇಖರ್, ಶ್ರೀ ಸಿದ್ದು ಸವದಿ ಮತ್ತು ಶ್ರೀ ನಾಡಗೌಡರವರುಗಳು ಇಟ್ಟಿರುವಂತಹ ಎಲ್ಲಾ ಬೇಡಿಕೆಗಳನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸುತ್ತದೆ.

ಪ್ರಶ್ನೆ ಸಂಖ್ಯೆ : 38 (349)

ಶ್ರೀ. ರವಿಸುಬ್ರಹ್ಮಣ್ಯ. ಎಲ್.ಎ : ಮಾನ್ಯ ಅಧ್ಯಕ್ಷರು

ಅಧ್ಯಕ್ಷರು : ಆಯಿತು. ಶ್ರೀ ರವಿಸುಬ್ರಹ್ಮಣ್ಯರವರ ಪ್ರಶ್ನೆ ಸಂಖ್ಯೆ:38(349). ಮಾನ್ಯ ಸಚಿವರೆ ತಾವು ಉತ್ತರವನ್ನು ಕೊಡುವುದಕ್ಕೆ ಕಾಲಾವಕಾಶವನ್ನು ಕೇಳಿದ್ದೀರಿ. ಉತ್ತರವನ್ನು ಯಾವಾಗ ಕೊಡುತ್ತೀರಿ?

ಶ್ರೀ ಸಿ.ಪಿ.ಯೋಗೇಶ್ವರ : ಮಾನ್ಯ ಸದಸ್ಯರಾದ ಶ್ರೀ ರವಿಸುಬ್ರಹ್ಮಣ್ಯರವರು ರಾಜ್ಯದ ಎಲ್ಲಾ ಕೆರೆಗಳ ವಿಚಾರದ ಬಗ್ಗೆ ಕೇಳಿದ್ದಾರೆ. ಈ ಅಸೆಂಬ್ಲಿಯು ಮುಗಿಯುವುದರೊಳಗಾಗಿ ಅಂದರೆ 2–3 ದಿನದಲ್ಲಿ ಉತ್ತರವನ್ನು ಕೊಡುತ್ತೇನೆ.

ಶ್ರೀ ರವಿಸುಬ್ರಹ್ಮಣ್ಯ.ಎಲ್.ಎ : ಕಳೆದ ಬಾರಿ ಸದನದಲ್ಲಿಯೂ ಕೂಡ ಈ Forest ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ಆಗಲೂ ಕೂಡ ಇದೇ ಉತ್ತರವನ್ನು ಕೊಟ್ಟಿದ್ದಾರೆ. ಏಕೆಂದರೆ ಅಧಿಕಾರಿಗಳು ಸ್ವಲ್ಪ ಜವಾಬ್ದಾರಿಯನ್ನು ವಹಿಸಲಿ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಸಚಿವರ ಹತ್ತಿರ ಈಗ ಉತ್ತರವಿಲ್ಲ ಇನ್ನು 2–3 ದಿನದಲ್ಲಿ ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದಾರೆ. ಡಾ: ಮಹದೇವಪ್ಪ ಹೆಚ್.ಸಿ.ರವರೆ ತಾವು ಪ್ರಶ್ನೆಯನ್ನು ಕೇಳಿ.